"15"

## ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 329 (429)
2) ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸುವ ದಿನಾಂಕ : 07.12.2023
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರಕು ಮತ್ತು ಸೇವಾ ತೆರಿಗೆಯ (GST) ವ್ಯಾಪ್ತಿ ಯಾವುದು; ಯಾವ್ಯಾವ ಸೇವೆಗಳು ಈ ತೆರಿಗೆಗೆ ಒಳಪಡುತ್ತಿವೆ; (ವಿವರ ನೀಡುವುದು) | ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮವು ರಾಜ್ಯದಾದ್ಯಂತ ವ್ಯಾಪ್ತಿಯನ್ನು ಹೊಂದಿರುತ್ತದೆ. ಕೇಂದ್ರ ಸರಕು ಮತ್ತು ಸೇವೆಗಳ ಅಧಿನಿಯಮ ಮತ್ತು ಏಕೀಕೃತ ಸರಕು ಮತ್ತು ಸೇವೆಗಳ ಅಧಿನಿಯಮವು ರಾಷ್ಟ್ರಾದ್ಯಂತ ವ್ಯಾಪ್ತಿಯನ್ನು ಹೊಂದಿರುತ್ತದೆ. ಸದರಿ ಅಧಿನಿಯಮಗಳ ಅಡಿಯಲ್ಲಿ ಎಲ್ಲಾ ಸೇವೆಗಳ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ನೀಡಲಾಗಿದೆ. ಸದರಿ ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮದ ಅಡಿಯಲ್ಲಿ ಅಧಿಸೂಚನೆ (12/2017) ಸಂಖ್ಯೆ: ಆಇ 48 ಸಿಎಸ್ಎಲ್ 2017, ದಿನಾಂಕ: 29.06.2017 ರಲ್ಲಿ ಅಧಿಸೂಚಿಸಲಾದ ಸೇವೆಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ಸೇವೆಗಳು ಈ ತೆರಿಗೆಗೆ ಒಳಪಡುತ್ತವೆ. |
| ಆ) | ಚಾರಿಟಬಲ್ ನಿಯಮಗಳಡಿ ನೋಂದಾಯಿತ ವಿದ್ಯಾ ಸಂಸ್ಥೆಗಳ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ತೆರಿಗೆ ಸಂಗ್ರಹಿಸಲು ಮಾನದಂಡಗಳ ಪಟ್ಟಿ ಇದೆಯೇ; ಇದ್ದರೆ, ವಿವರ ನೀಡುವುದು; | ಅಧಿಸೂಚನೆ (12/2017) ಸಂಖ್ಯೆ: ಆಇ 48 ಸಿಎಸ್ಎಲ್ 2017, ದಿನಾಂಕ: 29.06.2017 ರ ಕ್ರಮ ಸಂಖ್ಯೆ (1)ರ ಅಡಿಯಲ್ಲಿ ಆದಾಯ ತೆರಿಗೆ ಅಧಿನಿಯಮ 1961 (1961 ರ 43)ರ ಪ್ರಕರಣ 12 ಎಎ ರಡಿಯಲ್ಲಿ ನೋಂದಾಯಿತರಾದ ಒಂದು ಸಂಸ್ಥೆಯಿಂದ ಚಾರಿಟಬಲ್ ಕಾರ್ಯಗಳ ಮೂಲಕ ನೀಡಲಾಗುವ ಸೇವೆಗಳಿಗೆ ತೆರಿಗೆಯಿಂದ ವಿನಾಯಿತಿಗೊಂಡಿರುತ್ತದೆ. ಆದರೆ, ಸದರಿ ಅಧಿಸೂಚನೆಯ ಕಂಡಿಕೆ 2 (ಆರ್) ಅಡಿಯಲ್ಲಿ ಚಾರಿಟಬಲ್ ಸೇವೆಗಳನ್ನು ವ್ಯಾಖ್ಯಾನಿಸಲಾಗಿದೆ ಹಾಗೂ ಅದರಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ನೀಡಲಾಗುವ ಶಿಕ್ಷಣಕ್ಕೆ ಸಂಬಂಧಿಸಿದ ಸೇವೆಗಳು ಸೇರ್ಪಡೆಗೊಂಡಿರುವುದಿಲ್ಲ.<br>ಸದರಿ ಅಧಿಸೂಚನೆಯ ಕ್ರಮ ಸಂಖ್ಯೆ:66 ರ ಅಡಿಯಲ್ಲಿ ಒಂದು ಶಿಕ್ಷಣ ಸಂಸ್ಥೆ ತನ್ನ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ನೀಡಲಾಗುವ ಎಸ್ಎಸಿ 9992 (ಶಿಕ್ಷಣ ಸೇವೆಗಳು) ಮತ್ತು 9963 (ವಸತಿ, ಆಹಾರ ಮತ್ತು ಪಾನೀಯ ಸೇವೆಗಳು) ಸೇವೆಗಳನ್ನು ವಿನಾಯಿತಿಗೊಳಿಸಲಾಗಿದೆ ಮತ್ತು ಸದರಿ ಅಧಿಸೂಚನೆಯ ಕಂಡಿಕೆ 2(ವೈ)ರ ಅಡಿಯಲ್ಲಿ ತತ್ಕಾಲೀನ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಮಾನ್ಯತೆ ಪಡೆದ ಅರ್ಹತೆಯನ್ನು ಪಡೆಯುವುದಕ್ಕಾಗಿನ ಪಠ್ಯಕ್ರಮದ ಭಾಗವಾಗಿ ಶಿಕ್ಷಣದ ಮೂಲಕವಾಗಿ ಸೇವೆಗಳನ್ನು ನೀಡುವ ಒಂದು ಸಂಸ್ಥೆಯೆಂದು ವ್ಯಾಖ್ಯಾನಿಸಲಾಗಿದೆ. ಆದ್ದರಿಂದ, ಚಾರಿಟಬಲ್ ಸಂಸ್ಥೆಯು ನಡೆಸುವ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆ ಸಂಸ್ಥೆಯು ತನ್ನ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ನೀಡಲಾಗುವ ಎಸ್ಎಸಿ 9992 (ಶಿಕ್ಷಣ ಸೇವೆಗಳು) ಮತ್ತು 9963 (ವಸತಿ, ಆಹಾರ ಮತ್ತು ಪಾನೀಯ ಸೇವೆಗಳು) ಸೇವೆಗಳು ಈ ವಿನಾಯಿತಿಗೆ ಒಳಪಟ್ಟಿರುತ್ತವೆ. |
| ಇ) | ಚಾರಿಟಬಲ್ ನಿಯಮಗಳಡಿ ನೋಂದಾಯಿತ | ಮೇಲಿನ (ಆ) ದಂತೆ. ಆದ್ದರಿಂದ ಒಂದು ಶಿಕ್ಷಣ ಸಂಸ್ಥೆಯು |

| | | |
|---|---|---|
| | ವಿದ್ಯಾ ಸಂಸ್ಥೆಗಳು ನೀಡುವ ಯಾವ ಸೇವೆಗಳಿಗೆ ಹಾಗೂ ಸಂಗ್ರಹಿಸುವ ಯಾವ ಶುಲ್ಕಗಳಿಗೆ ಸರಕು ಮತ್ತು ಸೇವಾ ತೆರಿಗೆಯನ್ನು ಪಾವತಿಸಬೇಕಾಗುತ್ತದೆ; ಈ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಶುಲ್ಕ, ಟ್ಯೂಷನ್ ಶುಲ್ಕ, ಹಾಸ್ಟೆಲ್ ಶುಲ್ಕದ ಅಡಿಯಲ್ಲಿ ಸಂಗ್ರಹಿಸಲಾದ ಮೊತ್ತಕ್ಕೆ ಸರಕು ಮತ್ತು ಸೇವಾ ತೆರಿಗೆಯನ್ನು ಪಾವತಿಸುವ ಅಗತ್ಯವಿದೆಯೇ; (ವಿವರ ನೀಡುವುದು) | ತನ್ನ ವಿದ್ಯಾರ್ಥಿಗಳಿಂದ ಪಡೆಯಲಾಗುವ ಪ್ರವೇಶ ಶುಲ್ಕ, ಟ್ಯೂಷನ್ ಶುಲ್ಕ ಹಾಗೂ ಹಾಸ್ಟೆಲ್ ಶುಲ್ಕಗಳ ಮೊತ್ತಕ್ಕೆ ತೆರಿಗೆಯನ್ನು ಪಾವತಿಸುವ ಅಗತ್ಯವಿರುವುದಿಲ್ಲ. ಎಸ್‌ಎಸಿ 9992 (ಶಿಕ್ಷಣ ಸೇವೆಗಳು) ಮತ್ತು 9963 (ವಸತಿ, ಆಹಾರ ಮತ್ತು ಪಾನೀಯ ಸೇವೆಗಳು) ಅಡಿಯಲ್ಲಿ ಬರದ ಬೇರೆ ಯಾವುದೇ ಸೇವೆಗಳನ್ನು ನೀಡಿದ್ದಲ್ಲಿ ಅವುಗಳ ಮೇಲೆ ಸದರಿ ವಿದ್ಯಾ ಸಂಸ್ಥೆಗಳು ತೆರಿಗೆಯನ್ನು ಪಾವತಿಸಬೇಕಾಗುತ್ತದೆ. |
| ಈ) | ಈ ವಿದ್ಯಾ ಸಂಸ್ಥೆಗಳಲ್ಲಿ ಇ-ಕನ್ಸೋರ್ಟಿಯಂ, ಗ್ರಂಥಾಲಯ, ಎನ್.ಎಸ್.ಎಸ್. ಪದವಿ ಪ್ರಮಾಣಪತ್ರ ಮತ್ತು ಇತರ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯಗಳಿಗೆ ನೀಡಲು ಸಂಗ್ರಹಿಸಲಾದ ಇತರ ಶುಲ್ಕಗಳಿಗೆ ಸರಕು ಮತ್ತು ಸೇವಾ ತೆರಿಗೆ ಪಾವತಿಸಬೇಕಾಗಿದೆಯೇ; | ವಿಶ್ವ ವಿದ್ಯಾಲಯಗಳಿಗೆ ನೀಡಲು ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಅದೇ ಮೊತ್ತದ ಶುಲ್ಕವು ಸದರಿ ಸಂಸ್ಥೆಗಳು ವಿಶ್ವವಿದ್ಯಾಲಯದ ಪರವಾಗಿ ಈ ಸಂಸ್ಥೆಗಳು ಸಂಗ್ರಹಿಸುವುದರಿಂದ ಅವು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮ 2017ರ ನಿಯಮ 33ರ ಅಡಿಯಲ್ಲಿ ಪ್ಯೂರ್ ಏಜೆಂಟ್ ಆಗಿ ಕಾರ್ಯನಿರ್ವಹಿಸುವುದರಿಂದ, ಆ ಮೊತ್ತಗಳನ್ನು ವಿದ್ಯಾ ಸಂಸ್ಥೆಗಳ ಸೇವೆಗಳ ಪೂರೈಕೆಗಳ ಮೊತ್ತದಿಂದ ಹೊರಗಿಡಲಾಗಿದೆ. ಆದ್ದರಿಂದ ಸದರಿ ಶುಲ್ಕಗಳಿಗೆ ಸರಕು ಮತ್ತು ಸೇವಾ ತೆರಿಗೆಯನ್ನು ಪಾವತಿಸಬೇಕಾಗಿರುವುದಿಲ್ಲ. |
| ಉ) | ಚಾರಿಟಬಲ್ ನಿಯಮಗಳಡಿ ನೋಂದಾಯಿತ ವಿದ್ಯಾ ಸಂಸ್ಥೆಗಳಲ್ಲಿ ಸಿಬ್ಬಂದಿ ವಸತಿಗೃಹಗಳಿಗೆ ಸರಕು ಮತ್ತು ಸೇವಾ ತೆರಿಗೆಯನ್ನು ಪಾವತಿಸಬೇಕಾಗಿರುವುದು ಕಡ್ಡಾಯವಾಗಿದೆಯೇ; | ಮೇಲಿನ (ಅ)ದಂತೆ |
| ಊ) | ಈ ವಿದ್ಯಾ ಸಂಸ್ಥೆಗಳಲ್ಲಿ ಸರ್ಕಾರದಿಂದಲೇ ಉನ್ನತ ಅಧ್ಯಯನಕ್ಕಾಗಿ ಅಧ್ಯಾಪಕರನ್ನು ನಿಯೋಜಿಸಿ, ಪ್ರಾಯೋಜಕತ್ವ ಮಾಡಿದಾಗ ಹಾಗೂ ಉದ್ಯೋಗ ತರಬೇತಿಗಾಗಿ (ಪ್ಲೇಸ್ಮೆಂಟ್ ತರಬೇತಿ) ಪಡೆದ ಶುಲ್ಕದ ಮೇಲೆ ಸರಕು ಮತ್ತು ಸೇವಾ ತೆರಿಗೆಯನ್ನು ವಿಧಿಸಲು ಅವಕಾಶವಿದೆಯೇ? (ಸರಕು ಮತ್ತು ಸೇವಾ ತೆರಿಗೆ ನಿಯಮಗಳ ಸಹಿತ ವಿವರ ನೀಡುವುದು) | ಮೇಲಿನ (ಅ)ದಂತೆ, ಆದರೆ ತಮ್ಮ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಗೆ ಪದವಿ ಮುಗಿಸಿದ ನಂತರ ಪ್ಲೇಸ್ಮೆಂಟ್ ತರಬೇತಿಗಾಗಿ ಯಾವುದಾದರೂ ಶುಲ್ಕವನ್ನು ಪಡೆದರೆ ಆ ಶುಲ್ಕದ ಮೇಲೆ ಸರಕು ಮತ್ತು ಸೇವೆಗಳ ತೆರಿಗೆಯನ್ನು ವಿಧಿಸಿ ಪಾವತಿಸಬೇಕಾಗುತ್ತದೆ. ಕಾರಣ, ಅವರು ಆ ಸಂಸ್ಥೆಯ ವಿದ್ಯಾರ್ಥಿಗಳಾಗಿರುವುದಿಲ್ಲ.<br><br>ಪ್ರಾಯೋಜಕತ್ವದ ಬಗ್ಗೆ ಕೇಳಲಾಗಿರುವ ಪ್ರಶ್ನೆಯಲ್ಲಿ ಸ್ಪಷ್ಟತೆ ಇಲ್ಲದಿದ್ದ ಕಾರಣ ಸ್ಪಷ್ಟೀಕರಣವನ್ನು ನೀಡಲು ಸಾಧ್ಯವಾಗಿರುವುದಿಲ್ಲ |

ಸಂಖ್ಯೆ: ಆಇ 63 ಸಿಎಸ್‌ಎಲ್ 2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ